## ಇಲ್ಲಿಯವರೆಗೆ



ಹರಿಲಾಲ ಮಕ್ಕಳನ್ನು ನೋಡಲು ಹೋಗುತ್ತಾನೆ. ಮಗಳು ಮನುವನ್ನು ಎತ್ತಿಕೊಳ್ಳಲು ಹೋದಾಗ ಕಿರುಚಿ ಹಿಂದಕ್ಕೆ ಸರಿಯುತ್ತಾಳೆ. ಆಗ ಬಲಿ ಬಹನ್‌ಗೆ ವಿಷಯ ಗೊತ್ತಾಗಿ ಅರ್ಧ ರಾತ್ರಿಯಲ್ಲಿ ಹೀಗೆ ಕುಡಿದು ಬಂದು ರಂಪಾಟ ಮಾಡುವುದು ನಿನಗೆ ಶೋಭೆ ತರುವಂಥದ್ದಲ್ಲ ಎನ್ನುತ್ತಾಳೆ. ಮಗುವನ್ನು ಎತ್ತಿಕೊಳ್ಳಲು ಹೋಗಿ, ನಾನು ನಿನ್ನ ತಂದೆ ಬಾ ಎನ್ನುತ್ತಾನೆ. ಆಗ ಮನು ಅಪ್ಪ ನೀನು ಕುಡಿದು ಬಂದಿದ್ದಿ. ಎಷ್ಟು ಕೆಟ್ಟ ವಾಸನೆ ಬರುತ್ತಿದೆ ಎನ್ನುತ್ತಾಳೆ. ಬಲಿ ಬಹನ್ ಮೇಲೆ ಹರಿಲಾಲನಿಗೆ ವಿಪರೀತ ಸಿಟ್ಟು ಬಂದು 'ನೀನು ವೇಶ್ಯೆ, ವಿಧವೆ' ಎಂದೆಲ್ಲ ಮೂದಲಿಸುತ್ತಾನೆ. ಜಗಳ ತಾರಕಕ್ಕೇರಿ 'ಛಪಾಕ್' ಎಂದು ಹರಿಲಾಲನ ಕಪಾಳಕ್ಕೆ ಹೊಡೆಯುತ್ತಾಳೆ; ಇನ್ನೆಂದೂ ಇಲ್ಲಿಗೆ ಬರಬೇಡ, ತೊಲಗು ಇಲ್ಲಿಂದ' ಎಂದೂ ಅಬ್ಬರಿಸುತ್ತಾಳೆ.

ರಾಜಕೋಟದ ರೈಲು ನಿಲ್ದಾಣಕ್ಕೆ ಬಂದಾಗ ಆತನ ಕುಡಿತದ ಅಮಲು ಇಳಿದಿತ್ತು. ಹಿಂದೆ ಮುಂದೆ ನೋಡದೆ ಮುಂಬೈ ಟಿಕೆಟ್ ಖರೀದಿಸುತ್ತಾನೆ. ಕೋಲ್ಕತ್ತಾದಲ್ಲಿ ಖಿಲಾಫತ್ ಹೋರಾಟ ಮಾಡುತ್ತಿದ್ದಾಗ ವಜೀರ್ ಮುಹಮ್ಮದ್ ಎಂಬವರ ಪರಿಚಯವಾಗಿತ್ತು. ಅವರನ್ನು ನೆನಪಾಗಿ ಅವರು ನಡೆಸುತ್ತಿದ್ದ ನಿಜಾಮಿಯಾ ಹೋಟೆಲ್‌ಗೆ ಹೋಗುತ್ತಾನೆ. ಅಲ್ಲಿ ಹರಿಲಾಲನನ್ನು ವಜೀರ್ ಸ್ವಾಗತಿಸುತ್ತಾರೆ. ಆ ಹೋಟೆಲ್‌ನಲ್ಲಿ ಮದ್ಯದ ಕೊರತೆ ಇರುವುದಿಲ್ಲ. ಅಲ್ಲಿಯೇ ತಂಗುತ್ತಾನೆ ಹರಿಲಾಲ. ಅಲ್ಲಿಂದಲೇ ಬಾಪೂಗೆ ಒಂದು ಪತ್ರವನ್ನೂ ಬರೆಯುತ್ತಾನೆ.

ನಿಜಾಮಿಯಾ ಹೋಟೆಲ್‌ನಲ್ಲಿದ್ದು ಖರ್ಚಿಗೆ ಹಣದ ಕೊರತೆ ಉಂಟಾಗುತ್ತದೆ. ಆಗ ಹರಿಲಾಲನಿಗೆ ಹೈದರಾಬಾದ್‌ನಲ್ಲಿ ಅಬ್ಬಾಸ್ ಅಲಿ ಎಂಬಾತ ಇರುವುದು ನೆನಪಾಗಿ ಅಲ್ಲಿ ಏನಾದರೂ ಉದ್ಯೋಗ ಹಿಡಿಯಬಹುದೇ ಎಂದು ಯೋಚಿಸಿ ನೇರವಾಗಿ ಹೈದರಾಬಾದ್ ರೈಲು ಹತ್ತುತ್ತಾನೆ. ಇತ್ತಕಡೆ ಆತ್ಮಶುದ್ಧಿಗಾಗಿ ಬಾಪೂ ಉಪವಾಸ ಸತ್ಯಾಗ್ರಹ ಆರಂಭಿಸುತ್ತಾರೆ.

ಹರಿಲಾಲನ ಬಗ್ಗೆ ಯಾವುದೇ ಸಮಾಚಾರ ಸಿಕ್ಕಿರಲಿಲ್ಲ. ಅವನು ನಿಜಾಮಿಯಾ ಹೊಟೇಲನ್ನು ಬಿಟ್ಟಿರುವ ವಿಷಯ ಕೊನೆಯದಾಗಿ ತಿಳಿದಿತ್ತು. ಇಂಥ ಸಮಯದಲ್ಲಿ ಹರಿಲಾಲನ ಪತ್ರ ಓದಿ ಬಾಪೂ ಅವರಿಗೆ ಸಂತೋಷವಾಯಿತು. ಆದರೆ ಅವರು ಪತ್ರವನ್ನು ಓದಿ ಯೋಚನೆಗೊಳಗಾದರು. ಐವತ್ತನೇ ವಯಸ್ಸಿಗೆ ಕಾಲಿಟ್ಟಿರುವ ಹರಿಲಾಲ ಮತ್ತೆ ಮದುವೆಯಾಗಲು ಬಯಸುವುದು ಅವರಿಗೆ ಅರ್ಥವಾಗಲಿಲ್ಲ. ಹರಿಲಾಲನ ಮಗ್ಗಲುಗಳನ್ನು ಬಾಪೂ ಅವರು ಚೆನ್ನಾಗಿ ಅರಿತಿದ್ದರು. ಮಗನ ಮಾತನ್ನು ನಂಬಬೇಕೋ, ಬೇಡವೋ ಎಂಬುದು ಅರ್ಥವಾಗುತ್ತಿರಲಿಲ್ಲ. ಅಲ್ಲದೆ, ಹರಿಲಾಲ ಗ್ರಾಮ ಸುಧಾರಣೆಯಲ್ಲಿ ತನ್ನ ಉಳಿದ ಜೀವನವನ್ನು ಕಳೆಯುವುದಾಗಿ ಬರೆದಿದ್ದ, ಇದರಿಂದ ಬಾಪೂ ಅವರಿಗೆ ಆಶ್ಚರ್ಯವಾಗಿತ್ತು. ಅವರು ಮಹಾದೇವ ದೇಸಾಯಿಯವರನ್ನು ನೋಡುತ್ತಾ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದರು

'ಮಹಾದೇವ! ನನ್ನ ಮನಸ್ಸು ಈಗಲೂ ಸಹ ಹರಿಲಾಲನಿಗಾಗಿ ಮಿಡಿಯುತ್ತಿದೆ. ತಂದೆಯ ವ್ಯಾಮೋಹ ಭಗವದ್ಗೀತೆಯ ಪೂಜಾರಿಗೂ ಸಹ ಬಿಡುವುದಿಲ್ಲ. ಒಂದು ವೇಳೆ ಹರಿಲಾಲ ಗ್ರಾಮ ಸುಧಾರಣೆಯ ಕೆಲಸದಲ್ಲಿ ತೊಡಗಿಕೊಳ್ಳಲು ಬಯಸಿದರೆ, ನಾನು ಅವನ ಮಡಿಲಿನಲ್ಲಿ ಮರಣ ಹೊಂದಲು ಬಯಸುತ್ತೇನೆ.'

ಹೀಗೆಂದು ಬಾಪೂ ಸ್ವಲ್ಪ ತಡೆದರು. ಅವರು ತಮ್ಮ ಗಂಟಲನ್ನು ಸರಿಮಾಡಿಕೊಂಡರು. ಭಾವನೆಗಳಿಂದ ಮುಕ್ತರಾದಂತೆ ಕಂಡರು, ನಂತರ ಮೊದಲಿನಂತೆ ಗಂಭೀರತೆಯಿಂದ ಹೇಳಿದರು

'ಮಹಾದೇವ, ಹರಿಲಾಲನಿಗೆ ಪತ್ರವನ್ನು ಬರಿ. 'ನಿನಗೆ ಒಂದು ವೇಳೆ ಜೊತೆ ಬೇಕಾದರೆ, ಅದೂ ಹೆಂಡತಿಯಾಗಬೇಕಾದರೆ, ಒಬ್ಬ ಯೋಗ್ಯ ವಿಧವೆಯನ್ನು ಹುಡುಕುವುದರಲ್ಲಿ ದೋಷವಿಲ್ಲವೆಂದು ನಾನು ಭಾವಿಸುತ್ತೇನೆ.' ಆದರೆ ಇದನ್ನೂ ಬರಿ...'ಹೆಂಡತಿ ಬದುಕಿದ್ದಾಗ ನೀನು ಅವಳೊಂದಿಗೆ ಹೇಗೆ ವರ್ತಿಸಿದೆ ಎಂಬುದನ್ನೂ ನೆನಪಿಸಿಕೋ. ಗುಲಾಬ ಸುಂದರಿಯಾಗಿದ್ದಳು, ಗುಣವಂತೆಯಾಗಿದ್ದಳು, ಆದರೂ ನೀನು ಅವಳಿಗೆ ನಿಷ್ಠನಾಗಿರಲಿಲ್ಲ. ಅವಳು ಸತ್ತ ನಂತರ ನೀನು ಎಲ್ಲವನ್ನೂ ಮೀರಿ ನಡೆದೆ. ಇಂಥ ಪರಿಸ್ಥಿತಿಗಳಲ್ಲಿ ಎರಡನೆಯ ಹೆಂಡತಿಯನ್ನು ತಂದು ಅದ್ಯಾವ ಹೆಣ್ಣನ್ನು ಹಾಳು ಮಾಡುತ್ತೀಯ?' ಬಾಪೂ ಮತ್ತೆ ತಡೆದು ಹೇಳಿದರು ... 'ಮಹಾದೇವ! ಈ ವಿಷಯದಲ್ಲಿ ನೀನು ಅಥವಾ ಬೇರೆಯವರು ಹರಿಲಾಲನಿಗೆ ಸಹಾಯ ಮಾಡುವ ಬಗ್ಗೆ ನನ್ನ ಯಾವುದೇ ಆಕ್ಷೇಪಣೆಯಿಲ್ಲ, ಆದರೆ ಇದರಲ್ಲಿ ನನ್ನ ಹೆಸರು ಮಾತ್ರ ಬರಬಾರದು...ನನ್ನ ಸಲಹೆಯನ್ನು ಕೇಳಿದರೆ, ಅದಕ್ಕೆ ವಿರುದ್ಧವಾಗುವುದು...'

ಪತ್ರವನ್ನು ಬರೆಸಿ ಬಾಪೂ ಅವರು ಏನೂ ಅಗದಂತೆ ಮತ್ತೆ ವೈಸರಾಯ್ ಅವರೊಂದಿಗೆ ಪತ್ರ ವ್ಯವಹಾರದ ಚರ್ಚೆಯಲ್ಲಿ ಮಗ್ನರಾದರು.

ಮೂವತ್ತಮೂರು

ಸಿವಿಲ್ ಡಿಸೊಬಿಡಿಯನ್ಸ್ ಭಂಗದ ದೇಶವ್ಯಾಪಿ ಹೋರಾಟ, ಗಾಂಧಿ ಇರ್ವಿನ್ ಒಪ್ಪಂದ, ದುಂಡು ಮೇಜಿನ ಸಭೆ ಹಾಗೂ ಎಲ್ಲಾ ಅಸಹಕಾರ ಚಟುವಟಿಕೆಗಳ ನಂತರ ಬ್ರಿಟಿಷ್ ಆಡಳಿತ, ಈ ವಿಶಾಲ ದೇಶವನ್ನು ಸ್ವರಾಜ್ಯದ ದಿಕ್ಕಿನಲ್ಲಿ ಮುಂದುವರೆಸುವ ಉದ್ದೇಶದಿಂದ ಅಲ್ಪಸ್ವಲ್ಪ ಆಡಳಿತದ ಸುಧಾರಣೆಗಳನ್ನು ಉಡುಗೊರೆಯಾಗಿ ನೀಡುವ ಪ್ರಸ್ತಾಪವನ್ನಿಟ್ಟಿತ್ತು. ದೇಶದ ಸರ್ಕಾರದಲ್ಲಿ ಹಾಗೂ ಪ್ರಾಂತಗಳ ಸ್ವಾಯತ್ತ ಸರ್ಕಾರಗಳಲ್ಲಿ ಭಾರತೀಯರನ್ನು ಮಹತ್ವದ ಸ್ಥಳಗಳಿಗೆ ನೇಮಕ ಮಾಡಿಕೊಳ್ಳಲಾಗುವುದು ಎಂದು ಸರ್ಕಾರಿ ಘೋಷಣೆಯಾಗಿತ್ತು. ಕಾಶ್ಮೀರದಿಂದ ಕನ್ಯಾಕುಮಾರಿ ಮತ್ತು ಕಲ್ಕತ್ತಾದಿಂದ ಕಾಠಿಯಾವಾಡ್‌ವರೆಗೆ ವಿಸ್ತರಿಸಿದ ಈ ದೇಶಕ್ಕೆ ಈ ಸಣ್ಣಪುಟ್ಟ ಸುಧಾರಣೆಗಳಿಂದ ತೃಪ್ತಿಯಾಗಿರಲಿಲ್ಲ. ಅಲ್ಲದೆ ಕಾಂಗ್ರೆಸ್ ಮುಖಂಡರು ಸಹ ಈ ಸುಧಾರಣೆಗಳನ್ನು ಒಪ್ಪಿಕೊಳ್ಳುವುದಕ್ಕೆ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ದೇಶದ ಎಲ್ಲಾ ನೇತಾರರು ಮತ್ತು ಕೋಟ್ಯಂತರ ಭಾರತೀಯರ ದೃಷ್ಟಿ ಬಾಪೂ ಅವರ ಮೇಲೆ ನೆಟ್ಟಿತ್ತು. ಎಲ್ಲರೂ ಬಾಪೂ ಅವರ ತೀರ್ಮಾನವನ್ನು ನಿರೀಕ್ಷಿಸುತ್ತಿದ್ದರು.

ಆದರೆ ಬಾಪೂ ಅವರ ಎರಡೂ ಕಣ್ಣುಗಳಿಂದ ನಿರಂತರವಾಗಿ ಕಣ್ಣೀರು ಸುರಿಯುತ್ತಿತ್ತು. ಆದರೆ ಈ ಕಣ್ಣೀರು ಯಾರಿಗೂ ಕಾಣಿಸುತ್ತಿರಲಿಲ್ಲ. ಹಿಂದೂ ಮತ್ತು ಮುಸ್ಲಿಮರು ನನ್ನ ಎಡ ಮತ್ತು ಬಲ ಕಣ್ಣುಗಳು ಎಂದು ಬಹಿರಂಗವಾಗಿ ಮತ್ತು ನಿರಂತರವಾಗಿ ಹೇಳುವ ಬಾಪೂ ಅವರ ಎಡ ಕಣ್ಣಿಗೆ ಮುಸ್ಲೀಮ್ ಲೀಗ್ ಮತ್ತು ಜಿನ್ನಾ ಸಾಹೇಬರು ಕಲ್ಲು ಹೊಡೆದಿದ್ದರು. ಬಾಪೂ ಅವರ ಒಂದು ಕಣ್ಣಿನಿಂದ ಕಣ್ಣೀರು ಹರಿಯುತ್ತಿದ್ದು, ಇನ್ನೊಂದು ಕಣ್ಣಿನಿಂದ ರಕ್ತ ಒಸರುತ್ತಿತ್ತು. ಬಾಪೂ ಅವರು ಇಡೀ ದೇಶವನ್ನು ಸ್ವಾತಂತ್ರ್ಯದ ದಿಕ್ಕಿನೆಡೆಗೆ ಕರೆದೊಯ್ಯುತ್ತಿದ್ದರು, ಆ ಸ್ವಾತಂತ್ರ್ಯದ ಕುದಿಯುವ ಹಂಡೆಗೆ ವಿಷವನ್ನು ಹಾಕಲಾಗಿತ್ತು. ಈಗ ಹಿಂದೂಸ್ತಾನ ಒಂದು ದೇಶವಾಗಿ ಅಲ್ಲ, ಬದಲಾಗಿ ಹಿಂದೂ ಮತ್ತು ಮುಸ್ಲಿಮ್ ಎರಡು ವರ್ಗಗಳಾಗಿ ಹಂಚಿ ಹೋಗಿತ್ತು, ಈ ಎರಡೂ ವರ್ಗಗಳಿಗೆ ಪ್ರತ್ಯೇಕ ಸ್ವಾತಂತ್ರ್ಯ ಬೇಕಿತ್ತು. ಹಿಂದೂ ಮುಸ್ಲಿಮ್ ಭಾಯಿಭಾಯಿ ಈಗ ಒಂದು ನಿಯಮವಾಗಿರದೆ ಅಪವಾದವಾಗಿತ್ತು. ಕರಾಚಿ ಮತ್ತು ಕಲ್ಕತ್ತಾದವರೆಗೆ ಎಲ್ಲವೂ ಸರಿಯಿತ್ತು, ಆದರೆ ಮುಂಬೈಯ ಭಿಂಡಿ ಬಜಾರ್ ಮತ್ತು ಅಹಮದಾಬಾದ್‌ನ ಶಿಷ್ಟ ಪ್ರದೇಶಗಳಲ್ಲೂ ಸಹ ಈಗ 'ಪಾಕಿಸ್ತಾನವನ್ನು ಪಡೆದೇ ತೀರುತ್ತೇವೆ' ಎಂಬ ಮೂರ್ಖತನದ ಘೋಷಣೆಗಳು ಕೇಳಿ ಬರುತ್ತಿದ್ದವು. ಈ ಘೋಷಣೆಗಳ ಆರ್ಭಟಗಳ ನಡುವೆ ಧರ್ಮ ಅಥವಾ ಧಾರ್ಮಿಕ ಸಂಪ್ರದಾಯದ ಹೆಸರಿನಲ್ಲಿ ರಾಜಕೀಯವಾಗಿ ಅಥವಾ ಇನ್ನಿತರ ಸ್ವಾರ್ಥಗಳ ಬೇಳೆಯನ್ನು ಬೇಯಿಸಿಕೊಳ್ಳುವವರು ರಾತ್ರೋರಾತ್ರಿ ಮುಖಂಡರಾಗಿದ್ದರು.